1	2	3
57.	ಡೈರಿ ಟೆಕ್ನೀಷಿಯನ್ ದರ್ಜೆ-2	10
58.	ಡೈರಿ ಟೆಕ್ನೀಷಿಯನ್ ದರ್ಜೆ-4	32
59.	ಡೈರಿ ಆಪರೇಟರ್ ದರ್ಜೆ-2	01
60.	ಡೈರಿ ಆಪರೇಟರ್ ದರ್ಜೆ-4	74
61.	ಡೈರಿ ವರ್ಕರ್ ದರ್ಜೆ-4	27
62.	ಸಹಾಯಕ	41
	ಒಟ್ಟು	**401**

ಕೆ.ಆರ್. ನಗರ ತಾಲ್ಲೂಕು ಚುಂಚನಕಟ್ಟೆ ಹೋಬಳಿಗೆ ಸೇರಿದ ಹನಸೋಗ್ ಗ್ರಾಮಕ್ಕೆ ರಸ್ತೆ ನಿರ್ಮಾಣ

1025 (1175) ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಆರ್. ನಗರ ತಾಲ್ಲೂಕು ಚುಂಚನಕಟ್ಟೆ ಹೋಬಳಿಗೆ ಸೇರಿದ ಹನಸೋಗೆ ಗ್ರಾಮದ ಮಧ್ಯದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಯಲ್ಲಿ ವಾಹನ ಓಡಾಟ ಜಾಸ್ತಿಯಾಗಿದ್ದು ಈ ಗ್ರಾಮಕ್ಕೆ ಬದಲಿ ರಸ್ತೆ ಮಾಡುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ ಸದರಿ ಯೋಜನೆಗೆ ನಿಗದಿಪಡಿಸಿರುವ ಹಣ ಎಷ್ಟು; ಕೆಲಸ ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಹೌದು, ಕೆ.ಆರ್.ನಗರ ತಾಲ್ಲೂಕು ಚುಂಚನಕಟ್ಟೆ ಹೋಬಳಿಗೆ ಸೇರಿದ ಹನಸೋಗ್ ಗ್ರಾಮದ ಮಧ್ಯದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಯಲ್ಲಿ ವಾಹನ ಓಡಾಟ ಜಾಸ್ತಿಯಾಗಿದ್ದು, ಈ ಗ್ರಾಮಕ್ಕೆ ಬದಲೀ ರಸ್ತೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆ.

ಆ) ಇಲ್ಲಿಯವರೆಗೆ ಹಣ ನಿಗಧಿಪಡಿಸಿರುವುದಿಲ್ಲ. ಅನುದಾನದ ಲಭ್ಯತೆಯ ಮೇರೆಗೆ ಸದರಿ ಯೋಜನೆಯನ್ನು ತೆಗೆದುಕೊಳ್ಳಲು ಪರಿಶೀಲಿಸಲಾಗುವುದು.

ಹುಣಸೂರು ಉಪ ಅರಣ್ಯ ಸಂರಕ್ಷಣಾ ಕಛೇರಿಯಲ್ಲಿ ಹರಾಜು ಮಾಡಿರುವ ಮರಗಳು

1026 (1178) ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?